# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಮೀನುಗಾರಿಕೆ ನಿವೇಶನ ಹಂಚಿಕೆ ಸಮಿತಿಗೆ ಸಂಬಂಧಿಸಿದಂತೆ ನಿಯಮಗಳನ್ನು ಪರಿಷ್ಕರಿಸಿ ಹೊಸ ಪ್ರಸ್ತಾವನೆಯನ್ನು ಸಲ್ಲಿಸುವ ಬಗ್ಗೆ.

12059
2 AUG 2015

ಓದಲಾಗಿದೆ:-
(1) ಆದೇಶ ಸಂಖ್ಯೆ: ಪಸಂಮೀ/109/ಮೀಇಇ/2001, ದಿನಾಂಕ: 08-06-2001.
(2) ಆದೇಶ ಸಂಖ್ಯೆ: ಪಸಂಮೀ/50/ಮೀಇಇ/2010 (ಭಾಗ-1) ದಿನಾಂಕ: 03-06-2011.
(3) ಆದೇಶ ಸಂಖ್ಯೆ: ಪಸಂಮೀ/25/ಮೀಇಇ/2014, ದಿನಾಂಕ: 10-03-2014.
(4) ಆದೇಶ ಸಂಖ್ಯೆ: ಪಸಂಮೀ/105/ಮೀಇಇ/2014, ದಿನಾಂಕ: 23-12-2014.
(5) ಪತ್ರ ಸಂಖ್ಯೆ: ಬಂದರು/121/2015, ದಿನಾಂಕ: 05-06-2015.

******

## ಪ್ರಸ್ತಾವನೆ:

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಆದೇಶದಲ್ಲಿ, ರಾಜ್ಯದ ಎಲ್ಲಾ ಮೀನುಗಾರಿಕೆ ಬಂದರುಗಳಲ್ಲಿನ ಖಾಲಿ ನಿವೇಶನಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ನಿವೇಶನ ಹಂಚಿಕೆ ಸಮಿತಿಯನ್ನು ರಚಿಸಿದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಆದೇಶದಲ್ಲಿ, ರಾಜ್ಯದಲ್ಲಿ ವಿವಿಧ ಮೀನುಗಾರಿಕೆ ಉದ್ಯಮಗಳನ್ನು ನಡೆಸುವ ಸಂಬಂಧ ಮಂಗಳೂರು, ಮಲ್ಪೆ, ಗಂಗೊಳ್ಳಿ, ಹೊನ್ನಾವರ ಮೀನುಗಾರಿಕೆ ಬಂದರುಗಳ ವ್ಯಾಪ್ತಿಯ ಒಳಗೆ ಹಾಗು ಇತರೆ ಮೀನುಗಾರಿಕೆ ಬಂದರುಗಳ ವ್ಯಾಪ್ತಿಯ ಒಳಗೆ ಮತ್ತು ಹೊರಗೆ ಬರುವ ನಿವೇಶನಗಳನ್ನು ಗುತ್ತಿಗೆ ಮೇಲೆ ಪಡೆಯಲು ಬಯಸುವ ಸಂಘ ಸಂಸ್ಥೆಗಳು ಹೊಂದಿರಬೇಕಾದ ಅರ್ಹತೆ, ಪೂರೈಸಬೇಕಾದ ಷರತ್ತು, ನಿಬಂಧನೆಗಳು ಹಾಗು ಅವರ ಬೇಡಿಕೆಗಳನ್ನು ಪರಿಶೀಲಿಸಿ ಕೈಗೊಳ್ಳಬೇಕಾದ ಮುಂದಿನ ಕ್ರಮಗಳ ಬಗ್ಗೆ ಮಾರ್ಗದರ್ಶನಗಳನ್ನು ಎಲ್ಲ ಅನುಷ್ಠಾನಾಧಿಕಾರಿಗಳು ತಪ್ಪದೇ ಅನುಸರಿಸಲು ಆದೇಶಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಆದೇಶದಲ್ಲಿ, ಮೀನುಗಾರಿಕೆ ಇಲಾಖೆಗೆ ಕಂದಾಯ ಇಲಾಖೆ ಹಾಗು ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗಳಿಂದ ನಿವೇಶನಗಳನ್ನು ಗುತ್ತಿಗೆಗೆ ನೀಡುವ ಸಂಬಂಧ ಅನುಸರಿಸಬೇಕಾದ ಮಾನದಂಡಗಳನ್ನೊಳಗೊಂಡಂತೆ ಸಮಗ್ರ ನಿವೇಶನ ಹಂಚಿಕೆ ನೀತಿ ಕುರಿತು ಹೊರಡಿಸಿರುವ ಸಂಖ್ಯೆ: ಪಸಂಮೀ/50/ಮೀಇಇ/2010 (ಭಾಗ-1), ದಿನಾಂಕ: 03-06-2011ರ ಆದೇಶದಲ್ಲಿನ ಮಾರ್ಗದರ್ಶನಗಳೊಂದಿಗೆ ಹೆಚ್ಚುವರಿ ಮಾರ್ಗದರ್ಶಿಗಳನ್ನು ಅನುಸರಿಸಲು ಆದೇಶಿಸಲಾಗಿದೆ.

31-8-2015

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಆದೇಶದಲ್ಲಿ, ರಾಜ್ಯದ ವಿವಿಧ ಮೀನುಗಾರಿಕೆ ಬಂದರುಗಳಲ್ಲಿ ನಿವೇಶನಗಳನ್ನು ಗುತ್ತಿಗೆಗೆ ನೀಡುವಾಗ ಮಂಗಳೂರು ಮೀನುಗಾರಿಕೆ ಬಂದರಿನಲ್ಲಿ ಪ್ರತಿ ಚ.ಮೀ.ಗೆ ವಾರ್ಷಿಕ ರೂ.90-00 ರಂತೆ ಹಾಗೂ ಉಳಿದ ಎಲ್ಲಾ ಮೀನುಗಾರಿಕೆ ಬಂದರುಗಳು ಹಾಗೂ ಇಳಿದಾಣ ಕೇಂದ್ರಗಳಲ್ಲಿ ಪ್ರತಿ ಚ.ಮೀ.ಗೆ ರೂ.32-00 ರಂತೆ ಗುತ್ತಿಗೆ ದರವನ್ನು ಪ್ರಥಮ ವರ್ಷಕ್ಕೆ ನಿಗದಿಪಡಿಸಿ, ಆನಂತರದ ವರ್ಷಗಳಿಗೆ ಪ್ರತಿವರ್ಷ ಶೇ.10ರಷ್ಟನ್ನು ಹೆಚ್ಚಿಸಿ ದಿನಾಂಕ: 01-04-2014 ರಿಂದಲೇ ಅನ್ವಯವಾಗುವಂತೆ ಪರಿಷ್ಕರಿಸಿದೆ.

ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು ಇವರ ಪತ್ರದಲ್ಲಿ, ಇತ್ತೀಚೆಗೆ ಬಂದರುಗಳಲ್ಲಿ ಮತ್ತು ಮೀನುಗಾರಿಕೆ ಸಂಸ್ಕರಣಾ ಕೇಂದ್ರಗಳಲ್ಲಿ ಇಲಾಖೆಯಿಂದ ಮೂಲಭೂತ ಸೌಕರ್ಯಗಳನ್ನು ವಿಸ್ತರಿಸಲು ಜಾಗದ ಕೊರತೆ ಉಂಟಾಗುತ್ತಿದೆಯಲ್ಲದೆ, ಅನೇಕ ಗುತ್ತಿಗೆದಾರರು ಗುತ್ತಿಗೆ ಪಡೆದ ಸ್ಥಳಗಳಲ್ಲಿ ಕಟ್ಟಡಗಳನ್ನು ಕಟ್ಟಿ, ಅದರಲ್ಲಿ ವಾಣಿಜ್ಯ ಉದ್ದೇಶ ಚಟುವಟಿಕೆಗಳಿಗೆ ಬಳಸುತ್ತಿರುವುದು ಕಂಡುಬರುತ್ತಿದೆ. ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳ ನಿರ್ಮಾಣದ ಉದ್ದೇಶ ಸಮುದ್ರದಿಂದ ಮೀನು ಶಿಕಾರಿ ಮಾಡಿ ಬರುವ ಮೀನುಗಾರಿಕೆ ದೋಣಿಗಳಿಗೆ ಅವಶ್ಯವಿರುವ ಮೂಲಭೂತ ಸೌಕರ್ಯಗಳಾದ ಯಾಂತ್ರಿಕ ದೋಣಿಗಳ ಭರ್ತಿಂಗ್, ಡೀಸಲ್ ಸರಬರಾಜು ವ್ಯವಸ್ಥೆ, ಮಂಜುಗಡ್ಡೆ ಸರಬರಾಜು, ಹಿಡುವಳಿಯಾದ ಮೀನುಗಳನ್ನು ಶೇಖರಣೆ, ವಿಂಗಡಣೆ ಮತ್ತು ವಿಲೇ ಮಾಡಲು ಹರಾಜು ಪ್ರಾಂಗಣ ಕಲ್ಪಿಸಿಕೊಡುವುದು ಆಗಿದ್ದು, ಸದರಿ ಕೇಂದ್ರಗಳಲ್ಲಿ ಈ ಚಟುವಟಿಕೆಗಳಿಗೆ ಮಾತ್ರ ನಿವೇಶನಗಳನ್ನು ಹಂಚಬೇಕಾಗಿದೆ. ಹಾಗಾಗಿ ನಿವೇಶನ ಹಂಚಿಕೆಯ ಹಾಲಿ ಇರುವ ಮಾನದಂಡಗಳನ್ನು ಮರುಪರಿಶೀಲಿಸಿ ಮೀನುಗಾರಿಕೆ ಬಂದರು, ಮೀನುಗಾರಿಕೆ ಇಳಿದಾಣ ಕೇಂದ್ರ ಹಾಗೂ ಮೀನುಗಾರಿಕೆ ಸಂಸ್ಕರಣಾ ಕೇಂದ್ರಗಳಲ್ಲಿ ನಿವೇಶನಗಳನ್ನು ನೀಡುವ ಬಗ್ಗೆ ಮೀನುಗಾರಿಕೆ ಚಟುವಟಿಕೆಗಳಿಗೆ ಮಾತ್ರ ನಿಯಂತ್ರಣಗೊಳಿಸಲು ಒಂದು ನೂತನ ನೀತಿಯನ್ನು ರಚಿಸುವ ಅವಶ್ಯಕತೆ ಇದ್ದು, ಸದರಿ ಕೇಂದ್ರಗಳಲ್ಲಿ ಲಭ್ಯವಿರುವ ನಿವೇಶನಗಳನ್ನು ಹೊಸದಾಗಿ ವಿಲೇವಾರಿ ಮಾಡುವ ಬಗ್ಗೆ ಒಂದು ಕರಡು ನೀತಿಯನ್ನು ತಯಾರಿಸಿ, ಈ ಹಿಂದೆ ಗುತ್ತಿಗೆ ಮೇಲೆ ನೀಡಲಾದ ನಿವೇಶನಗಳನ್ನು ಹೊಸ ನೀತಿಯಡಿ ಮುಂದುವರೆಸುವ ಬಗ್ಗೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಮಾರ್ಗಸೂಚಿಯನ್ನು ಅನುಮೋದಿಸಿ ಸೂಕ್ತ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಪಸಂಮೀ 107 ಮೀಇಇ 2015, ಬೆಂಗಳೂರು ದಿನಾಂಕ: 25-08-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೀನುಗಾರಿಕೆ ಬಂದರುಗಳು, ಮೀನುಗಾರಿಕೆ ಇಳಿದಾಣ ಕೇಂದ್ರಗಳು ಮತ್ತು ಮೀನುಗಾರಿಕೆ ಸಂಸ್ಕರಣಾ ಕೇಂದ್ರಗಳಲ್ಲಿ ಲಭ್ಯವಿರುವ ನಿವೇಶನಗಳನ್ನು ಹೊಸದಾಗಿ ವಿಲೇವಾರಿ ಮಾಡುವ ಬಗ್ಗೆ ಈ ಆದೇಶದ **ಅನುಬಂಧ-1** ರಲ್ಲಿ ನಮೂದಿಸಿರುವ ಹಾಗೂ ಈ ಹಿಂದೆ ಗುತ್ತಿಗೆ ಮೇಲೆ ನೀಡಲಾದ ನಿವೇಶನಗಳನ್ನು ಹೊಸ ನೀತಿಯಡಿ ಮುಂದುವರೆಸುವ ಬಗ್ಗೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ **ಅನುಬಂಧ-2** ರಲ್ಲಿ ನಮೂದಿಸಿರುವ ಮಾರ್ಗಸೂಚಿಗಳಂತೆ ಅನುಸರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

25/8/15

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ)(ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಬೆಂಗಳೂರು.
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಬೆಂಗಳೂರು.
4) ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು ಹಾಗು ಅಭಿವೃದ್ಧಿ ಆಯುಕ್ತರು, ಬೆಂಗಳೂರು.
5) ಮಾನ್ಯ ಮುಖ್ಯ ಮಂತ್ರಿಗಳ ಪ್ರಧಾನ ಕಾರ್ಯದರ್ಶಿಗಳು, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಲೋಕೋಪಯೋಗಿ, ಬಂದರು & ಒಳನಾಡು ಜಲಸಾರಿಗೆ ಇಲಾಖೆ, ಬೆಂಗಳೂರು.
8) ನಿರ್ದೇಶಕರು, ಮೀನುಗಾರಿಕೆ ಇಲಾಖೆ, ವಿ.ವಿ.ಗೋಪುರ, ಬೆಂಗಳೂರು.
9) ನಿರ್ದೇಶಕರು, ಲೋಕೋಪಯೋಗಿ, ಬಂದರು & ಒಳನಾಡು ಜಲಸಾರಿಗೆ ಇಲಾಖೆ, ಕಾರವಾರ.
10) ಅಭಿಯಂತರರು, ಒಳನಾಡು ಜಲಸಾರಿಗೆ ಇಲಾಖೆ, ಕಾರವಾರ.
11) ಮೀನುಗಾರಿಕೆ ಜಂಟಿ ನಿರ್ದೇಶಕರು, ಮೀನುಗಾರಿಕೆ ಬಂದರುಗಳು, ಮಲ್ಪೆ.
12) ಎಲ್ಲಾ ಮೀನುಗಾರಿಕೆ ಉಪ ನಿರ್ದೇಶಕರು - ಮೀನುಗಾರಿಕೆ ನಿರ್ದೇಶಕರ ಮುಖಾಂತರ.
13) ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
14) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು / ಸಮನ್ವಯ-ಕಂಪೆಂಡಿಯಂ.

ಆದೇಶ ಸಂಖ್ಯೆ: ಪಸಂಮೀ 107 ಮೀಇಇ 2015, ಬೆಂಗಳೂರು ದಿನಾಂಕ: 25-08-2015 ರ

## ಅನುಬಂಧ-1

## ಮೀನುಗಾರಿಕೆ ಬಂದರು, ಇಳಿದಾಣ ಕೇಂದ್ರ ಮತ್ತು ಮೀನುಗಾರಿಕೆ ಸಂಸ್ಕರಣಾ ಕೇಂದ್ರ (Fish curing yards)ಗಳಲ್ಲಿ ವಿವಿಧ ಉದ್ದೇಶಗಳಿಗೆ ನಿವೇಶನ ವಿಲೇವಾರಿ ಮಾಡಲು ನೀತಿ

### I. ನಿವೇಶನ ವಿಲೇವಾರಿ ವಿಧಾನ:

1) **ಉದ್ದೇಶ:-** ಮೀನುಗಾರಿಕೆ ಬಂದರು, ಮೀನುಗಾರಿಕೆ ಇಳಿದಾಣ ಮತ್ತು ಮೀನುಗಾರಿಕೆ ಸಂಸ್ಕರಣಾ ಕೇಂದ್ರಗಳಲ್ಲಿ ಕೆಳಗಿನ ಉದ್ದೇಶಗಳಿಗೆ ಮಾತ್ರ ಸೀಮಿತಗೊಳಿಸಿ ನಿವೇಶನಗಳನ್ನು ವಿಲೇ ಮಾಡತಕ್ಕದ್ದು.

| ಕ್ರಮ ಸಂಖ್ಯೆ | ಉದ್ದೇಶ |
|---|---|
| 1 | ಡೀಸಲ್ ಬಂಕ್ ಸ್ಥಾಪನೆ |
| 2 | ಮಂಜುಗಡ್ಡೆ ಕಾರ್ಖಾನೆ ಮತ್ತು ಶೀತಲೀಕರಣ ಘಟಕ |
| 3 | ಮೀನು ಸಂಸ್ಕರಣಾ / ಅರೆ ಸಂಸ್ಕರಣಾ ಘಟಕ |
| 4 | ಮೀನುಗಾರಿಕೆ ದೋಣಿ ನಿರ್ಮಾಣ / ದುರಸ್ತಿ |
| 5 | ಮೀನುಗಾರಿಕೆ ದೋಣಿ ಇಂಜಿನ್ ದುರಸ್ತಿ |
| 6 | ಅಗ್ನಿಶಾಮಕ ಠಾಣೆ |
| 7 | ಕರಾವಳಿ ಭದ್ರತಾ ಪಡೆಯ ಠಾಣೆ |
| 8 | ಮೀನು ಹುಡಿ ಮತ್ತು ಮೀನೆಣ್ಣೆ ಸ್ಥಾವರ |
| 9 | ಮೀನು ಒಣಗಿಸುವ ಪ್ಲಾಟುಗಳು |
| 10 | ಮೀನುಗಾರಿಕೆ ಸಲಕರಣೆಗಳ ಗೋಡೌನ್ |
| 11 | ಮೀನೋಪಕರಣಗಳ / ಇಂಜಿನ್ ಬಿಡಿಭಾಗಗಳ ಮಾರಾಟ ಮಳಿಗೆ |

2) **ಮಾಸ್ಟರ್‌ಪ್ಲಾನ್:**

(ಅ) ಮೇಲಿನ ಉದ್ದೇಶಗಳ ಅವಶ್ಯಕತೆಗನುಗುಣವಾಗಿ ಎಲ್ಲಾ ಮೀನುಗಾರಿಕೆ ಬಂದರುಗಳ ಮತ್ತು ಮೀನುಗಾರಿಕೆ ಇಳಿದಾಣ ಕೇಂದ್ರಗಳ **ಮಾಸ್ಟರ್‌ಪ್ಲಾನ್‌ನ್ನು** ತಯಾರಿಸಿ ಸರ್ಕಾರದಿಂದ ಅನುಮೋದನೆಯನ್ನು ಪಡೆಯುವುದು. ಪಡೆದನಂತರವೇ ನಿವೇಶನಗಳ ಹಂಚಿಕೆಗೆ ಕ್ರಮವಹಿಸುವುದು.

(ಆ) ಮಾಸ್ಟರ್‌ಪ್ಲಾನಿನಲ್ಲಿ ಗುರುತಿಸಲಾದ ಜಾಗದಲ್ಲೇ ಉದ್ದೇಶಿತ ಚಟುವಟಿಕೆಗಳನ್ನು ಕೈಗೊಳ್ಳಲು ನಿವೇಶನಗಳನ್ನು ವಿಲೇ ಮಾಡಲು ಕ್ರಮವಹಿಸುವುದು.

(ಇ) ಗುರುತಿಸಲಾದ ಎಲ್ಲಾ ನಿವೇಶನಗಳನ್ನು ಟೆಂಡರ್-ಕಂ-ಹರಾಜು ಮುಖಾಂತರವೇ ವಿಲೇವಾರಿ ಮಾಡತಕ್ಕದ್ದು (ಕರಾವಳಿ ಕಾವಲುಪಡೆಯ ಪೋಲೀಸ್ ಠಾಣೆ ಮತ್ತು ಅಗ್ನಿಶಾಮಕ ಠಾಣೆ ಹೊರತುಪಡಿಸಿ).

3) **ಅರ್ಹ ಬಿಡ್‌ದಾರರು:-** ವಿವಿಧ ಉದ್ದೇಶಗಳಿಗೆ ನಿವೇಶನಗಳನ್ನು ವಿಲೇ ಮಾಡುವ ಪ್ರಕರಣಗಳಲ್ಲಿ ಟೆಂಡರ್-ಕಂ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರನ್ನು ಈ ಕೆಳಗಿನಂತೆ ಸೀಮಿತಗೊಳಿಸಲಾಗಿದೆ.

ಎ) **ಡೀಸಲ್ ಬಂಕ್ ಸ್ಥಾಪನೆ:**

1) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ, ಮಂಗಳೂರು.
2) ಜಿಲ್ಲಾ ಮೀನು ಮಾರಾಟ ಫೆಡರೇಶನ್‌ಗಳು.
3) ಮೀನುಗಾರರ ಸಹಕಾರಿ ಸಂಘಗಳು.

ಬಿ) **ಮಂಜುಗಡ್ಡೆ ಕಾರ್ಖಾನೆ ಮತ್ತು ಶೀತಲೀಕರಣ ಘಟಕ**

1) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ
2) ಜಿಲ್ಲಾ ಮೀನು ಮಾರಾಟ ಫೆಡರೇಷನ್‌ಗಳು.
3) ಸ್ಥಳೀಯ ಮೀನುಗಾರರ ಸಹಕಾರ ಸಂಘಗಳು

ಸಿ) **ಮೀನು ಸಂಸ್ಕರಣಾ / ಅರೆ ಸಂಸ್ಕರಣಾ ಘಟಕ**

1) ಮೀನು ಸಂಸ್ಕರಣೆ / ಅರೆ ಸಂಸ್ಕರಣೆ ಸಂಬಂಧಿಸಿದ ಚಟುವಟಿಕೆಯಲ್ಲಿ ಅನುಭವ ಹೊಂದಿರುವ ವ್ಯಕ್ತಿ / ಸಂಸ್ಥೆ.

ಡಿ) **ಮೀನುಗಾರಿಕೆ ದೋಣಿಗಳ ನಿರ್ಮಾಣ / ದುರಸ್ತಿ:**

ರಾಜ್ಯ ಅಥವಾ ಕೇಂದ್ರ ಸರ್ಕಾರದಲ್ಲಿ ನೋಂದಾಯಿಸಿದ ದೋಣಿ ನಿರ್ಮಾಣ / ದುರಸ್ತಿ ಸಂಸ್ಥೆ / ವ್ಯಕ್ತಿ.

ಇ) **ಮೀನುಗಾರಿಕೆ ದೋಣಿ ಇಂಜಿನ್ ದುರಸ್ತಿ / ವರ್ಕ್‌ಶಾಪ್**

1) ಮೀನುಗಾರಿಕೆ ದೋಣಿ, ಇಂಜಿನ್ ನಿರ್ಮಾಣ ಮಾಡುವ ಅಧಿಕೃತ ಕಂಪನಿ / ಪ್ರತಿನಿಧಿ.

2) ಮೆರೈನ್ ಇಂಜಿನ್ ದುರಸ್ತಿಯಲ್ಲಿ ಕನಿಷ್ಠ 5 ವರ್ಷ ಅನುಭವ ಹೊಂದಿರುವ ಖಾಸಗಿ ನೋಂದಾಯಿತ ಸಂಸ್ಥೆ / ವ್ಯಕ್ತಿ.

ಎಫ್) **ಮೀನು ಹುಡಿ ಮತ್ತು ಮೀನೆಣ್ಣೆ ಸ್ಥಾವರ**

1) ಮೀನು ಹುಡಿ / ಮೀನೆಣ್ಣೆ ಸಂಬಂಧಿಸಿದ ಚಟುವಟಿಕೆಯಲ್ಲಿ ಅನುಭವ ಹೊಂದಿರುವ ವ್ಯಕ್ತಿ / ಸಂಸ್ಥೆ.

ಜಿ) **ಮೀನು ಒಣಗಿಸುವ ಪ್ಲಾಟುಗಳು**

1) ಮೀನು ಸಂಸ್ಕರಣೆ ಮಾಡಿ ಮೀನು ಒಣಗಿಸುವ ಚಟುವಟಿಕೆಯಲ್ಲಿ ತೊಡಗಿರುವ ವ್ಯಕ್ತಿ / ಸಂಸ್ಥೆ.

ಹೆಚ್) **ಮೀನುಗಾರಿಕೆ ಸಲಕರಣೆಗಳ ಗೋಡೌನ್**

1) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ
2) ಜಿಲ್ಲಾ ಮೀನು ಮಾರಾಟ ಫೆಡರೇಷನ್‌ಗಳು.
3) ಸ್ಥಳೀಯ ಮೀನುಗಾರರ ಸಹಕಾರ ಸಂಘಗಳು
4) ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವ ನೋಂದಾಯಿತ ಸಂಸ್ಥೆಗಳು

ಐ) **ಮೀನೋಪಕರಣಗಳ / ಇಂಜಿನ್ ಬಿಡಿಭಾಗಗಳ ಮಾರಾಟ ಮಳಿಗೆ**

1) ಮೀನುಗಾರಿಕೆ ಚಟುವಟಿಕೆಯ ಉಪಕರಣಗಳ ಮಾರಾಟದಲ್ಲಿ ತೊಡಗಿರುವ ವ್ಯಕ್ತಿ / ಸಂಸ್ಥೆ.
2) ಇಂಜಿನ್ ಬಿಡಿಭಾಗಗಳ ಮಾರಾಟದಲ್ಲಿ ತೊಡಗಿರುವ ವ್ಯಕ್ತಿ / ಸಂಸ್ಥೆ.

4) **ವಿಲೇ ಮಾಡಬಹುದಾದ ಅವಧಿ ಮತ್ತು ನೀಡಬಹುದಾದ ಗರಿಷ್ಠ ವಿಸ್ತೀರ್ಣ:**

ವಿವಿಧ ಉದ್ದೇಶಗಳಿಗೆ ನೀಡಬಹುದಾದ ಗರಿಷ್ಠ ವಿಸ್ತೀರ್ಣ ಹಾಗೂ ಗರಿಷ್ಠ ಅವಧಿಯನ್ನು ಈ ಕೆಳಗಿನಂತೆ ನಿಗದಿಪಡಿಸತಕ್ಕದ್ದು.

| ಕ್ರಮ ಸಂಖ್ಯೆ | ಉದ್ದೇಶ | ನೀಡಬೇಕಾದ ಗರಿಷ್ಠ ಅವಧಿ | ನೀಡಬೇಕಾದ ಗರಿಷ್ಠ ವಿಸ್ತೀರ್ಣ / ಚ.ಮೀ |
|---|---|---|---|
| 1 | ಡೀಸಲ್ ಬಂಕ್ ಸ್ಥಾಪನೆ | 20 ವರ್ಷ | 150 |
| 2 | ಮಂಜುಗಡ್ಡೆ ಕಾರ್ಖಾನೆ ಮತ್ತು ಶೀತಲೀಕರಣ ಘಟಕ | 20 ವರ್ಷ | 700 |
| 3 | ಮೀನು ಸಂಸ್ಕರಣಾ / ಅರೆ ಸಂಸ್ಕರಣಾ ಘಟಕ | 20 ವರ್ಷ | 2000 |
| 4 | ಮೀನುಗಾರಿಕೆ ದೋಣಿ ನಿರ್ಮಾಣ / ದುರಸ್ತಿ | 15 ವರ್ಷ | 2000 |
| 5 | ಮೀನುಗಾರಿಕೆ ದೋಣಿ ಇಂಜಿನ್ ದುರಸ್ತಿ | 10 ವರ್ಷ | 100 |
| 6 | ಅಗ್ನಿಶಾಮಕ ಠಾಣೆ | 30 ವರ್ಷ | 300 |
| 7 | ಕರಾವಳಿ ಭದ್ರತಾ ಪಡೆಯ ಠಾಣೆ | 30 ವರ್ಷ | 100 |
| 8 | ಮೀನು ಹುಡಿ ಮತ್ತು ಮೀನೆಣ್ಣೆ ಸ್ಥಾವರ | 20 ವರ್ಷ | 4000 |
| 9 | ಮೀನು ಒಣಗಿಸುವ ಪ್ಲಾಟುಗಳು | 5 ವರ್ಷ | 900 |
| 10 | ಮೀನುಗಾರಿಕೆ ಸಲಕರಣೆಗಳ ಗೋಡೌನ್ | 10 ವರ್ಷ | 100 |
| 11 | ಮೀನೋಪಕರಣಗಳ / ಇಂಜಿನ್ ಬಿಡಿ ಭಾಗಗಳ ಮಾರಾಟ ಮಳಿಗೆ | 10 ವರ್ಷ | 100 |

-4-

ಹೆಚ್) ಮೀನುಗಾರಿಕೆ ಸಲಕರಣೆಗಳ ಗೋಡೌನ್

1) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮ
2) ಜಿಲ್ಲಾ ಮೀನು ಮಾರಾಟ ಫೆಡರೇಷನ್‌ಗಳು.
3) ಸ್ಥಳೀಯ ಮೀನುಗಾರರ ಸಹಕಾರ ಸಂಘಗಳು
4) ಮೀನುಗಾರಿಕೆ ಚಟುವಟಿಕೆಯಲ್ಲಿ ತೊಡಗಿರುವ ನೋಂದಾಯಿತ ಸಂಸ್ಥೆಗಳು

ಐ) ಮೀನೋಪಕರಣಗಳ / ಇಂಜಿನ್ ಬಿಡಿಭಾಗಗಳ ಮಾರಾಟ ಮಳಿಗೆ

1) ಮೀನುಗಾರಿಕೆ ಚಟುವಟಿಕೆಯ ಉಪಕರಣಗಳ ಮಾರಾಟದಲ್ಲಿ ತೊಡಗಿರುವ ವ್ಯಕ್ತಿ / ಸಂಸ್ಥೆ.
2) ಇಂಜಿನ್ ಬಿಡಿಭಾಗಗಳ ಮಾರಾಟದಲ್ಲಿ ತೊಡಗಿರುವ ವ್ಯಕ್ತಿ / ಸಂಸ್ಥೆ.

4) ವಿಲೇ ಮಾಡಬಹುದಾದ ಅವಧಿ ಮತ್ತು ನೀಡಬಹುದಾದ ಗರಿಷ್ಟ ವಿಸ್ತೀರ್ಣ:

ವಿವಿಧ ಉದ್ದೇಶಗಳಿಗೆ ನೀಡಬಹುದಾದ ಗರಿಷ್ಟ ವಿಸ್ತೀರ್ಣ ಹಾಗೂ ಗರಿಷ್ಟ ಅವಧಿಯನ್ನು ಈ ಕೆಳಗಿನಂತೆ ನಿಗದಿಪಡಿಸತಕ್ಕದ್ದು.

| ಕ್ರಮ ಸಂಖ್ಯೆ | ಉದ್ದೇಶ | ನೀಡಬೇಕಾದ ಗರಿಷ್ಟ ಅವಧಿ | ನೀಡಬೇಕಾದ ಗರಿಷ್ಟ ವಿಸ್ತೀರ್ಣ / ಚ.ಮೀ |
|---|---|---|---|
| 1 | ಡೀಸೆಲ್ ಬಂಕ್ ಸ್ಥಾಪನೆ | 20 ವರ್ಷ | 150 |
| 2 | ಮಂಜುಗಡ್ಡೆ ಕಾರ್ಖಾನೆ ಮತ್ತು ಶೀತಲೀಕರಣ ಘಟಕ | 20 ವರ್ಷ | 700 |
| 3 | ಮೀನು ಸಂಸ್ಕರಣಾ / ಅರೆ ಸಂಸ್ಕರಣಾ ಘಟಕ | 20 ವರ್ಷ | 2000 |
| 4 | ಮೀನುಗಾರಿಕೆ ದೋಣಿ ನಿರ್ಮಾಣ / ದುರಸ್ತಿ | 15 ವರ್ಷ | 2000 |
| 5 | ಮೀನುಗಾರಿಕೆ ದೋಣಿ ಇಂಜಿನ್ ದುರಸ್ತಿ | 10 ವರ್ಷ | 100 |
| 6 | ಅಗ್ನಿಶಾಮಕ ಠಾಣೆ | 30 ವರ್ಷ | 300 |
| 7 | ಕರಾವಳಿ ಭದ್ರತಾ ಪಡೆಯ ಠಾಣೆ | 30 ವರ್ಷ | 100 |
| 8 | ಮೀನು ಹುಡಿ ಮತ್ತು ಮೀನೆಣ್ಣೆ ಸ್ಥಾವರ | 20 ವರ್ಷ | 4000 |
| 9 | ಮೀನು ಒಣಗಿಸುವ ಪ್ಲಾಟುಗಳು | 5 ವರ್ಷ | 900 |
| 10 | ಮೀನುಗಾರಿಕೆ ಸಲಕರಣೆಗಳ ಗೋಡೌನ್ | 10 ವರ್ಷ | 100 |
| 11 | ಮೀನೋಪಕರಣಗಳ / ಇಂಜಿನ್ ಬಿಡಿ ಭಾಗಗಳ ಮಾರಾಟ ಮಳಿಗೆ | 10 ವರ್ಷ | 100 |

-4-

ಮಂಜುಗಡ್ಡೆ ಸ್ಥಾವರ ಹಾಗೂ ಶೀತಲೀಕರಣ ಘಟಕಗಳಿಗೆ ನೀಡಬಹುದಾದ ನಿವೇಶನದ ವಿಸ್ತೀರ್ಣ ಹಾಗೂ ಗರಿಷ್ಠ ಅವಧಿಯನ್ನು ಈ ಕೆಳಗಿನಂತೆ ನಿಗದಿಪಡಿಸತಕ್ಕದ್ದು.

| ಕ್ರಮ ಸಂಖ್ಯೆ | ಉದ್ಯಮ ಮತ್ತು ಸಾಮರ್ಥ್ಯ (ಟನ್‌ಗಳಲ್ಲಿ) | ನೀಡಬೇಕಾದ ಗರಿಷ್ಠ ನಿವೇಶನ (ಚದರ ಮೀಟರ್‌ಗಳಲ್ಲಿ) |
|---|---|---|
| 1. | **ಮಂಜುಗಡ್ಡೆ ಸ್ಥಾವರ** | |
| | 10 | 200 |
| | 15 | 250 |
| | 20 | 300 |
| | 30 | 400 |
| | 40 | 450 |
| | 50 | 500 |
| | 60 | 550 |
| | 80 | 600 |
| | 100 | 700 |
| 2. | ಶೈತ್ಯಾಗಾರ ಘಟಕ: (ಮಂಜುಗಡ್ಡೆ ಘಟಕಗಳೊಂದಿಗೆ ನಿರ್ಮಿಸುವಾಗ) | |
| | 10 | 20 |
| | 20 | 30 |
| | 25 | 40 |
| | 30 | 45 |
| | 50 | 60 |
| | 100 | 120 |

II **ಟೆಂಡರ್-ಕಂ-ಹರಾಜಿನಲ್ಲಿ ವಿಲೇವಾರಿ ಮಾಡಲು ಅನುಸರಿಸಬೇಕಾದ ವಿಧಾನಗಳು:**

1) ಮೊದಲಿಗೆ ಮಾಸ್ಟರ್‌ಪ್ಲಾನ್‌ನ್ನು ಸರ್ಕಾರದಿಂದ ಅನುಮೋದನೆ ಪಡೆಯಬೇಕು.

2) ನಿಯಮಾನುಸಾರ ವಿಲೇವಾರಿಗೆ ಸಂಬಂಧಿಸಿದಂತೆ ಮೀನುಗಾರಿಕೆ ನಿರ್ದೇಶಕರವರ ಪೂರ್ವಾನುಮತಿ ಪಡೆದು ಟೆಂಡರ್-ಕಂ-ಹರಾಜಿನ ಪ್ರಕಟಣೆ ಹೊರಡಿಸುವುದು.

3) ಕಛೇರಿಗಳ ಪ್ರಕಟಣಾ ಫಲಕಗಳಲ್ಲಿ ಪ್ರಚಾರ ನೀಡುವುದು ಹಾಗೂ ಪತ್ರಿಕೆಗಳಲ್ಲಿ ವ್ಯಾಪಕ ಪ್ರಚಾರ ನೀಡುವುದು.

4) ಟೆಂಡರ್-ಕಂ-ಹರಾಜು ನಿಗದಿತ ದಿನಾಂಕದಲ್ಲಿ ಮಾಡುವಾಗ ಮೊದಲೇ ಹರಾಜನ್ನು ನಡೆಸಿ ಹರಾಜಿನಲ್ಲಿ ಬಂದ ಯಶಸ್ವಿ ಬಿಡ್‌ನ್ನು ಗುರುತಿಸಿಕೊಂಡ ನಂತರ ಬಂದಿರುವ ಟೆಂಡರನ್ನು ತೆರೆಯುವುದು. ಈ ಎರಡರಲ್ಲಿ ಯಾವ ಹಣ ಹೆಚ್ಚಿಗೆ ನಮೂದಿಸಲಾಗಿದೆಯೋ, ಆ ಮೊತ್ತಕ್ಕೆ ಟೆಂಡರ್-ಕಂ-ಹರಾಜು ಯಶಸ್ವಿ ಬಿಡ್‌ನ್ನು ನಿಗದಿಸಿ ಪ್ರಸ್ತಾವನೆಯನ್ನು ಮಂಜೂರಾತಿಗೆ ಸಲ್ಲಿಸುವುದು.

—

-5-

5) ಟೆಂಡರ್-ಕಂ-ಹರಾಜು ಬಂದರುಗಳಲ್ಲಿ ಜಂಟಿ ನಿರ್ದೇಶಕರ ಸಮಕ್ಷಮ ಹಾಗೂ ಮೀನುಗಾರಿಕೆ ಇಳಿದಾಣ ಕೇಂದ್ರ, ಸಂಸ್ಕರಣಾ ಕೇಂದ್ರಗಳಲ್ಲಿ ಮೀನುಗಾರಿಕೆ ಉಪ ನಿರ್ದೇಶಕರ ಸಮಕ್ಷಮ ನಡೆಸತಕ್ಕದ್ದು.

6) <u>ಯಶಸ್ವಿ ಬಿಡ್ಡುದಾರರ ಅನುಮೋದನೆ</u>

ಯಶಸ್ವಿ ಬಿಡ್ ಮೊತ್ತ

ರೂ.1.00 ಲಕ್ಷದೊಳಗೆ ಇದ್ದರೆ - ಮೀನುಗಾರಿಕೆ ನಿರ್ದೇಶಕರು

ರೂ.1.00 ಲಕ್ಷಕ್ಕಿಂತ ಮೇಲ್ಪಟ್ಟಿದ್ದರೆ - ಸರ್ಕಾರದ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

7) ಮಂಜೂರಾತಿ ಆದೇಶದ ನಂತರ ನೀತಿ ಹಾಗೂ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಕರಾರು ಪತ್ರವನ್ನು ಸಿದ್ಧಪಡಿಸಿಕೊಳ್ಳುವುದು.

---

III) ನಿವೇಶನಗಳನ್ನು ಟೆಂಡರ್-ಕಂ-ಹರಾಜು ಮುಖಾಂತರ ವಿಲೇವಾರಿ ಮಾಡುವಾಗ ಬಿಡ್‌ದಾರರು ಪಾಲಿಸಬೇಕಾದ ಷರತ್ತು ಮತ್ತು ನಿಬಂಧನೆಗಳು:

1) ನಿಗದಿತ ಟೆಂಡರ್ ಅರ್ಜಿಯನ್ನು ಕಚೇರಿ ವೇಳೆಯಲ್ಲಿ ಟೆಂಡರ್ ಅರ್ಜಿ ರೂ.100/-ನ್ನು ಪಾವತಿಸಿ ಪಡೆಯತಕ್ಕದ್ದು.

2) ಪ್ರತಿ ಉದ್ದೇಶಿತ ನಿವೇಶನಕ್ಕೆ ಪ್ರತ್ಯೇಕ ಟೆಂಡರ್ ಅರ್ಜಿಯನ್ನು ಸಲ್ಲಿಸತಕ್ಕದ್ದು.

3) ಟೆಂಡರ್ ಮತ್ತು ಹರಾಜಿನಲ್ಲಿ ಭಾಗವಹಿಸುವವರು ಇಲಾಖೆಯಿಂದ ನಿಗದಿಪಡಿಸುವ ಭದ್ರತಾ ಠೇವಣಿ ಹಣವನ್ನು ನಗದು / ಹುಂಡಿಯ (ಡಿ.ಡಿ.) ಮೂಲಕ ಪಾವತಿಸಿ ಟೆಂಡರ್‌ನಲ್ಲಿ ಭಾಗವಹಿಸುವುದು.

4) ಭರ್ತಿ ಮಾಡಿದ ಟೆಂಡರ್ ಅರ್ಜಿಯನ್ನು ಮೊಹರು ಮಾಡಿದ ಲಕೋಟೆಯಲ್ಲಿ ಭದ್ರತಾ ಠೇವಣಿಯೊಂದಿಗೆ ಸಂಬಂಧಪಟ್ಟ ಅಧಿಕಾರಿಗೆ ನಿಗದಿತ ದಿನಾಂಕ / ನಿಗದಿತ ವೇಳೆಯೊಳಗೆ ಸಲ್ಲಿಸತಕ್ಕದ್ದು. ಟೆಂಡರಿನಲ್ಲಿ ಪ್ರಥಮ ವರ್ಷದ ಗುತ್ತಿಗೆ ಮೊತ್ತವನ್ನು ನಮೂದಿಸುವುದು.

5) ಟೆಂಡರ್ ನೀಡಿರುವವರು ಹರಾಜಿನಲ್ಲೂ ಸಹ ಭಾಗವಹಿಸಲು ಅವಕಾಶವಿದೆ. ಟೆಂಡರ್ ನೀಡದೆ ಇರುವವರು ಹರಾಜು ಸಮಯದಲ್ಲಿ ಭದ್ರತಾ ಠೇವಣಿ ಪಾವತಿಸಿ ಕೇವಲ ಹರಾಜಿನಲ್ಲಿ ಭಾಗವಹಿಸಲು ಅವಕಾಶವಿದೆ.

6) ಟೆಂಡರ್-ಕಂ-ಹರಾಜು ನಿಗದಿತ ದಿನಾಂಕದಲ್ಲಿ ಮಾಡುವಾಗ ಮೊದಲು ಹರಾಜನ್ನು ನಡೆಸುವುದು. ಹರಾಜಿನಲ್ಲಿ ಬಂದ ಯಶಸ್ವಿ ಬಿಡ್‌ನ್ನು ಗುರುತಿಸಿಕೊಂಡ ನಂತರ ಬಂದಿರುವ ಟೆಂಡರನ್ನು ತೆರೆಯುವುದು. ಈ ಎರಡರಲ್ಲಿ ಯಾವ ಮೊತ್ತ ಹೆಚ್ಚಿಗೆ ನಮೂದಿಸಲಾಗಿದೆಯೋ, ಆ ಮೊತ್ತಕ್ಕೆ ಟೆಂಡರ್-ಕಂ-ಹರಾಜು ಯಶಸ್ವಿ ಬಿಡ್‌ನ್ನು ಸಲ್ಲಿಸುವುದು. ಈ ಮೊತ್ತವು ಪ್ರಥಮ ವರ್ಷದ ಗುತ್ತಿಗೆ ಮೊತ್ತವಾಗುವುದು. ನಂತರದ ವರ್ಷಗಳಿಗೆ ಹಿಂದಿನ ವರ್ಷದ ಗುತ್ತಿಗೆ ಮೊತ್ತದ ಮೇಲೆ ಶೇ.10ರಷ್ಟು ಹೆಚ್ಚಳ ಮಾಡಿ ನಿಗದಿಪಡಿಸಲಾಗುವುದು.

7) ಯಶಸ್ವಿ ಬಿಡ್‌ದಾರರು / ಟೆಂಡರ್‌ದಾರರು ಬಿಡ್ ಮಾಡಲಾದ ಮೊತ್ತವನ್ನು ಸ್ಥಳದಲ್ಲೇ ಪಾವತಿಸಿ ಸಂಬಂಧಪಟ್ಟ ಅಧಿಕಾರಿಯಿಂದ ರಶೀದಿಯನ್ನು ಪಡೆಯತಕ್ಕದ್ದು. ತದನಂತರ ಉಳಿದ ಬಿಡ್‌ದಾರರ ಠೇವಣಿ ಹಣವನ್ನು ಹಿಂದಿರುಗಿಸಲಾಗುವುದು.

8) ಒಮ್ಮೆ ಮೊದಲನೇ ಯಶಸ್ವಿ ಬಿಡ್‌ದಾರರು ಬಿಡ್ ಮೊತ್ತವನ್ನು ಸ್ಥಳದಲ್ಲಿ ಪಾವತಿಸದೇ ಇದ್ದಲ್ಲಿ, ಸದರಿಯವರು ನೀಡುವ ಭದ್ರತಾ ಠೇವಣಿ ಮೊಬಲಗನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು 2ನೇ ಅತಿ ಹೆಚ್ಚಿನ ಟೆಂಡರ್‌ದಾರರು / ಬಿಡ್‌ದಾರರು, ಮೊದಲನೇ ಬಿಡ್‌ದಾರರು / ಟೆಂಡರ್‌ದಾರರು ಸೂಚಿಸಿದ ಗರಿಷ್ಠ ಟೆಂಡರ್ ಅಥವಾ ಬಿಡ್ ಮೊತ್ತವನ್ನು ಸ್ಥಳದಲ್ಲಿಯೇ ಪಾವತಿಸಲು ಒಪ್ಪಿದಲ್ಲಿ ಮಾತ್ರ, ಅವರ ಹೆಸರಿಗೆ ಟೆಂಡರ್-ಕಂ-ಹರಾಜು ಯಶಸ್ವಿ ಬಿಡ್‌ನ್ನು ಪರಿಗಣಿಸಲಾಗುವುದು. ಒಂದು ವೇಳೆ ಎರಡನೇ ಬಿಡ್‌ದಾರರು ಅತಿ ಹೆಚ್ಚು ಮೊತ್ತವನ್ನು ಕೊಡುವುದಕ್ಕೆ ಒಪ್ಪದಿದ್ದ ಪಕ್ಷದಲ್ಲಿ ಮರು ಟೆಂಡರ್-ಕಂ-ಹರಾಜಿನಲ್ಲಿ ವಿಲೇವಾರಿ ಮಾಡಲು ಕ್ರಮಕೈಗೊಳ್ಳಲಾಗುವುದು.

9) ಟೆಂಡರ್-ಕಂ-ಹರಾಜಿನ ಯಶಸ್ವಿ ಬಿಡ್ ಮೀನುಗಾರಿಕೆ ನಿರ್ದೇಶಕರು / ಸರ್ಕಾರದ ಅನುಮೋದನೆಗೆ ಒಳಪಟ್ಟಿದೆ.

10) ಮೀನುಗಾರಿಕೆ ನಿರ್ದೇಶಕರು / ಸರ್ಕಾರ ಬಿಡ್ ಮೊತ್ತವನ್ನು ಅನುಮೋದಿಸಿದ ನಂತರ ಯಶಸ್ವಿ ಬಿಡ್‌ದಾರರರು, ಬಿಡ್‌ನ ಶೇ.10 ಬಡ್ಡಿರಹಿತ ಭದ್ರತಾ ಠೇವಣಿಯನ್ನು ಒಂದು ತಿಂಗಳೊಳಗೆ ಇಲಾಖೆಗೆ ಪಾವತಿಸತಕ್ಕದ್ದು. ಮತ್ತು ಚಾಲ್ತಿಯಲ್ಲಿರುವ ಷರತ್ತು ಮತ್ತು ನಿಬಂಧನೆಗಳಿಗೆ ಹಾಗೂ ಈ ದಿಸೆಯಲ್ಲಿ ಸರ್ಕಾರ / ಮೀನುಗಾರಿಕೆ ಇಲಾಖೆಯು ಕಾಲಕಾಲಕ್ಕೆ ವಿಧಿಸುವ ಹೆಚ್ಚುವರಿ ಷರತ್ತು ಮತ್ತು ನಿಬಂಧನೆಗಳಿಗೆ ಬದ್ಧರಾಗಿರುವುದಾಗಿ ರೂ.200/- ಮೌಲ್ಯದ ಛಾಪಾಕಾಗದದಲ್ಲಿ ನಿಗದಿತ ಮುಚ್ಚಳಿಕೆ ಪತ್ರವನ್ನು ಬರೆದು, ಸಂಬಂಧಪಟ್ಟ ಅಧಿಕಾರಿಗೆ ಒಂದು ತಿಂಗಳೊಳಗಾಗಿ ನೀಡುವುದು.

11) ಇಲಾಖೆಯ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ರೂ.200/- ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ನೀಡಿ, ಯಶಸ್ವಿ ಬಿಡ್ ಮೊತ್ತದ ಶೇ.10ರಂತೆ ಬಡ್ಡಿರಹಿತ ಭದ್ರತಾ ಠೇವಣಿಯನ್ನು ಪಾವತಿಸಿದ ನಂತರ ಇಲಾಖೆಯಿಂದ ವಿಲೇವಾರಿ ದೃಢೀಕರಣ ಪತ್ರವನ್ನು ನೀಡಿ ನಿವೇಶನ ಹಸ್ತಾಂತರಿಸುವುದು.

12) ಟೆಂಡರ್‌ದಾರರು / ಬಿಡ್‌ದಾರರು ಎರಡನೇ ಮತ್ತು ತದನಂತರ ವರ್ಷದ ಬಿಡ್ ಮೊತ್ತವನ್ನು ಪ್ರತಿವರ್ಷ ಅವಧಿ ಮುಗಿಯುವ ಒಂದು ತಿಂಗಳ ಮೊದಲೇ ಸಂಬಂಧಿಸಿದ ಅಧಿಕಾರಿಗೆ ಪಾವತಿಸಿ ರಶೀದಿಯನ್ನು ಪಡೆದುಕೊಳ್ಳತಕ್ಕದ್ದು. ಇಲ್ಲವಾದಲ್ಲಿ ನೀಡಲಾದ ನಿವೇಶನದ ಗುತ್ತಿಗೆಯನ್ನು ರದ್ದುಗೊಳಿಸಿ ಮರುವಿಲೇವಾರಿ ಮಾಡಲು ಕ್ರಮವಹಿಸಲಾಗುವುದು. ಹಾಗೂ ಸದರಿಯವರು ಪಾವತಿಸಲಾದ ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

13) ಟೆಂಡರ್‌ದಾರರು / ಬಿಡ್‌ದಾರರು ಗುತ್ತಿಗೆ ಮೇಲೆ ಪಡೆದ ನಿವೇಶನದ ಹಕ್ಕನ್ನು ಯಾವುದೇ ಕಾರಣಕ್ಕೂ ಇತರರಿಗೆ ವರ್ಗಾಯಿಸತಕ್ಕದ್ದಲ್ಲ. ಹಾಗೂ ಉಪ ಗುತ್ತಿಗೆ ನೀಡತಕ್ಕದ್ದಲ್ಲ. ಒಮ್ಮೆ ಈ ರೀತಿ ಮಾಡಿದ್ದಲ್ಲಿ ನಿವೇಶನದ ರದ್ಧತಿಗೆ ಕ್ರಮ ಕೈಗೊಳ್ಳಲಾಗುವುದು.

14) ಟೆಂಡರ್-ಕಂ-ಹರಾಜಿನಲ್ಲಿ ನಿವೇಶನ ಪಡೆದವರು ಕಟ್ಟಡ ನಿರ್ಮಿಸುವ ಮುನ್ನ ನಕ್ಷೆ ಮತ್ತು ಅಂದಾಜು ಯೋಜನಾ ವರದಿಯನ್ನು (ಡಿ.ಪಿ.ಆರ್.) ತಯಾರಿಸಿ, ಮೀನುಗಾರಿಕೆ ಇಲಾಖೆಯಿಂದ ಅನುಮೋದನೆ ಪಡೆಯುವುದು. ಹಾಗೂ ಪರಿಸರ ಇಲಾಖೆಯ / ಮಾಲಿನ್ಯ ನಿಯಂತ್ರಣ ಮಂಡಳಿಯ ಹಾಗೂ ಇತರೆ ಸರ್ಕಾರಿ ಇಲಾಖೆಗಳಿಂದ / ಪ್ರಾಧಿಕಾರಗಳಿಂದ ಅವಶ್ಯವಿರುವ ನಿರಾಕ್ಷೇಪಣಾ ಪತ್ರಗಳನ್ನು ಪಡೆದು, ನಂತರವೇ ಕಾಮಗಾರಿಗಳನ್ನು ಪ್ರಾರಂಭಿಸುವುದು.

15) ಯಾವುದೇ ಕಾರಣಕ್ಕೂ ಯಶಸ್ವಿ ಬಿಡ್‌ದಾರರು ನಿವೇಶನ ಪಡೆದ ಒಂದು ವರ್ಷದೊಳಗಾಗಿ ಕಾಮಗಾರಿಯನ್ನು ಪ್ರಾರಂಭಿಸಬೇಕು ಮತ್ತು ನಿವೇಶನ ಪಡೆದ ದಿನಾಂಕದಿಂದ ಎರಡು ವರ್ಷದ ಒಳಗೆ ಉದ್ದೇಶಿಸಿದ ಚಟುವಟಿಕೆಯನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭಿಸುವುದು. ಇಲ್ಲದಿದ್ದ ಪಕ್ಷದಲ್ಲಿ ಸದರಿ ಟೆಂಡರ್-ಕಂ-ಹರಾಜನ್ನು ರದ್ದುಪಡಿಸಿ ಇಲಾಖೆಯ ವಶಕ್ಕೆ ಪಡೆಯಲಾಗುವುದು ಹಾಗೂ ಪಾವತಿಸಲಾದ ಬಿಡ್ ಹಣ ಮತ್ತು ಭದ್ರತಾ ಠೇವಣಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

16) ನಿವೇಶನಗಳಲ್ಲಿ ನಿಗದಿಪಡಿಸಿದ ಉದ್ದೇಶಗಳಿಗೆ ಅಗತ್ಯವಿರುವ ಕಟ್ಟಡಗಳನ್ನು ಮಾತ್ರ ನಿರ್ಮಿಸಲು ಅವಕಾಶವಿದ್ದು, ಇತರೆ ವಾಣಿಜ್ಯ ಮಳಿಗೆಗಳು, ಮೀಟಿಂಗ್ ಹಾಲ್, ಕಛೇರಿ, ಇತ್ಯಾದಿಗಳನ್ನು ನಿರ್ಮಿಸಲು ಅವಕಾಶವಿರುವುದಿಲ್ಲ.

17) ಪಡೆದ ನಿವೇಶನದ ಅವಧಿಯು ಮುಗಿದನಂತರ ಸದರಿ ನಿವೇಶನವನ್ನು ಕಟ್ಟಡದ ಸಮೇತ ಇಲಾಖೆಯ ವಶಕ್ಕೆ ವಹಿಸಿಕೊಡಬೇಕು. ಹಾಗೂ ಸದರಿ ಕಟ್ಟಡದ ಯಾವುದೇ ನಿರ್ಮಾಣ ವೆಚ್ಚವನ್ನು / ಪರಿಹಾರವನ್ನು ಇಲಾಖೆಯಿಂದ ನೀಡಲಾಗುವುದಿಲ್ಲ.

25/8/15

(ರಶ್ಮಿ ಶಿವಶಂಕರ ಪೋಳ್)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

ಆದೇಶ ಸಂಖ್ಯೆ: ಪಸಂಮೀ 107 ಮೀಇಇ 2015, ಬೆಂಗಳೂರು ದಿನಾಂಕ: 25-08-2015 ರ

## ಅನುಬಂಧ-2

## ಈ ಹಿಂದೆ ಗುತ್ತಿಗೆ ಮೇಲೆ ನೀಡಲಾದ ನಿವೇಶನಗಳನ್ನು ಹೊಸ ನೀತಿಯಡಿ ಮುಂದುವರಿಸುವ ಬಗ್ಗೆ ಮಾರ್ಗಸೂಚಿಗಳು

ಹೊಸ ನೀತಿಯು ಬರುವ ಮುನ್ನ ಸರ್ಕಾರದಿಂದ ಗುತ್ತಿಗೆ ಮೇಲೆ ನೀಡಲಾದ ನಿವೇಶನಗಳನ್ನು ಹೊಸ ನೀತಿಯಡಿಯಲ್ಲಿ ತರಲು ಈ ಕೆಳಗಿನಂತೆ ಕ್ರಮವಹಿಸುವುದು.

1) ಹೊಸ ನೀತಿಯಡಿಯಲ್ಲಿ ಗುರುತಿಸಲಾದ ಉದ್ದೇಶಗಳಿಗೆ ಮಾತ್ರ ಈಗಾಗಲೇ ಗುತ್ತಿಗೆ ನೀಡಲಾದ ನಿವೇಶನಗಳನ್ನು ಮುಂದುವರಿಸುವುದು.

2) ಹೊಸ ನೀತಿಯಡಿಯಲ್ಲಿ ನಿಗದಿಪಡಿಸಿರುವ ಅವಧಿಯವರೆಗೆ ಮಾತ್ರ ಗುತ್ತಿಗೆಯನ್ನು (ಈ ಹಿಂದೆ ನೀಡಿದ ಅವಧಿಯು ಸೇರಿದಂತೆ) ಮುಂದುವರಿಸಲಾಗುವುದು. ತದನಂತರ ನಿವೇಶನದ ಅವಧಿಯು ಮುಗಿದನಂತರ ಸದರಿ ನಿವೇಶನವನ್ನು ಕಟ್ಟಡದ ಸಮೇತ ಇಲಾಖೆಯ ವಶಕ್ಕೆ ವಹಿಸಿಕೊಡಬೇಕು. ಹಾಗೂ ಸದರಿ ಕಟ್ಟಡದ ಯಾವುದೇ ನಿರ್ಮಾಣ ವೆಚ್ಚವನ್ನು / ಪರಿಹಾರವನ್ನು ಇಲಾಖೆಯಿಂದ ನೀಡಲಾಗುವುದಿಲ್ಲ. ಮತ್ತು ಹೊಸ ನೀತಿಯಂತೆ ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡಲಾಗುವುದು.

3) ಗುತ್ತಿಗೆ ಅವಧಿಯಲ್ಲಿ ಕಾಲಕಾಲಕ್ಕೆ ನಿಗದಿಪಡಿಸುವ ಮೊತ್ತವನ್ನು ಪಾವತಿಸುವುದು.

4) ಹೊಸ ನೀತಿಯಡಿಯಲ್ಲಿ ನಮೂದಿಸಲಾದ ಉದ್ದೇಶಗಳನ್ನು ಬಿಟ್ಟು ಇತರೇ ಉದ್ದೇಶಗಳಿಗೆ ಈಗಾಗಲೇ ನಿವೇಶನವನ್ನು ನೀಡಿದ್ದಲ್ಲಿ, ಅಂತಹ ನಿವೇಶನಗಳ ಗುತ್ತಿಗೆ ಅವಧಿ ಮುಗಿದ ಕೂಡಲೇ, ಸದರಿ ನಿವೇಶನವನ್ನು, ಕಟ್ಟಡ ನಿರ್ಮಿಸಿದ್ದು, ಕಟ್ಟಡದೊಂದಿಗೆ ಇಲಾಖಾ ವಶಕ್ಕೆ ಪಡೆದುಕೊಳ್ಳಲಾಗುವುದು ಹಾಗೂ ಈ ಬಗ್ಗೆ ಗುತ್ತಿಗೆದಾರರಿಗೆ ಯಾವುದೇ ಪರಿಹಾರ ನೀಡಲಾಗುವುದಿಲ್ಲ.

5) ಮೀನುಗಾರಿಕೆ ನಿವೇಶನವನ್ನು ಗುತ್ತಿಗೆ ನೀಡಿದ ನಂತರ ಗುತ್ತಿಗೆ ಅವಧಿ ಮುಕ್ತಾಯವಾದ ಮೇಲೆ ಗುತ್ತಿಗೆದಾರರು ಇಲಾಖೆ ನಿಗದಿಪಡಿಸಿದ ನಿಯಮಕ್ಕೆ ಒಳಪಟ್ಟು ಮುಂದುವರಿಯಲು ಇಚ್ಛಿಸಿದಲ್ಲಿ, ಮುಂದುವರೆಸಲು ಅವಕಾಶ ಕಲ್ಪಿಸತಕ್ಕದ್ದು.

25/8/15

(ರಶ್ಮಿ ಶಿವಶಂಕರ ಪೋಳ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)